P.C.J & JMFC, Tarikere
(Itinerate at Ajjampura).

CC No. 212/2020
PW-1

**(ದಿಃ05.12.2025 ರಂದು ಆದ ಮಧ್ಯಂತರ ಅರ್ಜಿಯ ಮೇಲಿನ ಆದೇಶದ ಅನ್ವಯ)**

**ದಿನಾಂಕ 06-12-2025 ರಂದು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**: ಮುಂದುವರಿದ ಮುಖ್ಯ ವಿಚಾರಣೆ :: ಪಿರ್ಯಾದುದಾರರ ಪರ ಶ್ರೀ.SNM ವಕೀಲರಿಂದ :**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ವಿಷಯಗಳು ಸರಿಯಾಗಿದ್ದು, ನಾನೇ ಓದಿ ತಿಳಿದು ಸಹಿ ಮಾಡಿರುತ್ತೇನೆ.

ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ದಾಖಲೆಗಳನ್ನು ಈಗ ನೋಡುತ್ತಿದ್ದೇನೆ, ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

| Sl.No. | Documents | Exhibits |
|---|---|---|
| 1 | ಮಾನ್ಯ ಪಿಸಿಜೆ ಹಾಗೂ ಜೆ ಎಂ ಎಫ್ ಸಿ ಚನ್ನಗಿರಿ ರವರ ನ್ಯಾಯಾಲಯದ ಅಸಲು ದಾವಾ 247/2019 ಗೆ ಸಂಬಂಧಪಟ್ಟ ಆದೇಶಪುಟ ಹಾಗೂ ವಾದ ಪತ್ರದ ದೃಡೀಕೃತ ನಕಲು | Ex.P-5 ಮತ್ತು 6 |
| 2 | ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ಚನ್ನಗಿರಿ ರವರ ನ್ಯಾಯಾಲಯದ ಸಿಸಿ 60/2023 ಗೆ ಸಂಬಂಧಪಟ್ಟ ತೀರ್ಪಿನ ದೃಡೀಕೃತ ನಕಲು | Ex.P-7 |
| 3 | ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ಚನ್ನಗಿರಿ ರವರ ನ್ಯಾಯಾಲಯದ ಸಿಸಿ 40/2023 ಗೆ ಸಂಬಂಧಪಟ್ಟ ತೀರ್ಪಿನ ದೃಡೀಕೃತ ನಕಲು | Ex.P-8 |
| 4 | 18 ಕಂಪ್ಯೂಟರೀಕೃತ ಪಹಣಿಗಳನ್ನು ಕ್ರಮವಾಗಿ | Ex.P-26 |

ಆದ್ದರಿಂದ ಆರೋಪಿ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕಾಗಿ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ.

**:: ಪಾಟೀಸವಾಲು :: ಆರೋಪಿ ಪರ ಶ್ರೀ.KMM ವಕೀಲರಿಂದ ::**

ನಾನು 5 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ವ್ಯವಹಾರದ ಜ್ಞಾನ ಇರುತ್ತದೆ. ನನಗೆ ಕನ್ನಡ ಓದಲು ಬರುತ್ತದೆ. ಆದರೆ ಬರೆಯಲು ಅಷ್ಟಾಗಿ ಬರುವುದಿಲ್ಲ. ನಾನು ಸಾಮಾನ್ಯವಾಗಿ ಯಾವುದೇ ವ್ಯವಹಾರ ಮಾಡುವಾಗ ದಾಖಲೆ ತೆಗೆದುಕೊಳ್ಳದೇ ವ್ಯವಹಾರ ಮಾಡುವುದಿಲ್ಲ ಎಂದರೆ ಸರಿ. ಆರೋಪಿಗೆ ನಾನು ಅಡಿಕೆ ನೀಡಿರುವ ಬಗ್ಗೆ ಎಷ್ಟು ಟನ್ ಗಳ ಅಡಿಕೆ ನೀಡಿರುತ್ತೇನೆ ಎನ್ನುವ ಬಗ್ಗೆ ದಾಖಲಾತಿಗಳನ್ನು ಪಡೆದಿರುವುದಿಲ್ಲ, ಕಾರಣ ನಾನು ಅವರ ಜೊತೆ 15 ವರ್ಷಗಳಿಂದ ವ್ಯವಹಾರ ಮಾಡುತ್ತಿದ್ದೆ. 15 ವರ್ಷಗಳಿಂದ ಆರೋಪಿ ಜೊತೆ ವ್ಯವಹಾರ ಮಾಡುವುದನ್ನು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಅದನ್ನು ಮುಂದೆ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ದೊಡ್ಡ ರೈತ ಆಗಿರುತ್ತೇನೆ. ಅದನ್ನು ತೋರಿಸಲು ನಾನು ನ್ಯಾಯಾಲಯಕ್ಕೆ ನನ್ನ ಜಮೀನುಗಳು ಪಹಣಿಗಳನ್ನು ಹಾಜರುಪಡಿಸಿರುತ್ತೇನೆ. ಸರ್ವೇ ನಂಬರ್ 70/2, 33/3, 51/3 ಮತ್ತು 51/4, 72/2, 54/2, 51/5, 125/2 ನನ್ನ ಜಮೀನಿಗೆ ಸಂಬಂಧಪಟ್ಟ ಪಹಣಿ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಅದು ನಮ್ಮ ಒಟ್ಟು ಕುಟುಂಬದ ಜಮೀನಿನ ಪಹಣಿ ಎಂದು ನುಡಿಯುತ್ತಾರೆ. ಸದರಿ ಪಹಣಿಗಳಲ್ಲಿ ಕೆಲವು ಪಹಣಿಗಳಲ್ಲಿ ನನ್ನ ಹೆಸರು ಇದ್ದು ಕೆಲವು ಪಹಣಿಗಳಲ್ಲಿ ನನ್ನ ಕುಟುಂಬದವರ ಹೆಸರು ಇರುತ್ತದೆ. ಸಾಕ್ಷಿಯು ಮುಂದುವರೆದು ನನ್ನ ಮಗನಿಗೆ ಸಂಬಂಧಪಟ್ಟ 15 ಎಕರೆ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಮೇಲೆ

ಹೇಳಿದ ಸರ್ವೇ ನಂಬರ್ ಗಳ ಪಹಣಿಗಳಲ್ಲಿ ನನ್ನ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಇನ್ನು ಸಹ ಒಟ್ಟು ಕುಟುಂಬದಲ್ಲಿ ಇರುತ್ತೇನೆಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು ಒಟ್ಟು ಕುಟುಂಬದಲ್ಲಿ ಇಲ್ಲದಿದ್ದರೂ ಮತ್ತು ಮೇಲೆ ಹೇಳಿದ ಸರ್ವೇ ನಂಬರ್ ಆಸ್ತಿಗಳು ನನ್ನದಾಗಿಲ್ಲದಿದ್ದರೂ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಇರುವ ಪಹಣಿಗಳ ಜಮೀನುಗಳಲ್ಲಿ ನಾನು ಇತ್ತೀಚೆಗೆ ಸಣ್ಣ ಅಡಿಕೆ ಸಸಿ ನೆಟ್ಟಿದ್ದು ಅಲ್ಲಿ ಯಾವುದೇ ಫಲ ಬರುತ್ತಿಲ್ಲ ಎಂದರೆ ಸರಿಯಲ್ಲ. ಸಿಸಿ 213/2020 ರಲ್ಲಿನ ಪಕ್ಷಗಾರರಾದ ಸಿ ಬಿ ಶಿವಮೂರ್ತಿ ರವರು ನನ್ನ ಚಿಕ್ಕಪ್ಪನ ಮಗ. ನಾನು ಚನ್ನಗಿರಿಯ TUMCOS ನಲ್ಲಿ ಸದಸ್ಯನಾಗಿರುತ್ತೇನೆ. ನಾನು ತರೀಕೆರೆಯ TUMCOS ನಲ್ಲಿ ನಾನು ಸದಸ್ಯನಾಗಿರುವುದಿಲ್ಲ. ಕಾರಣ ಅದು ಇತ್ತೀಚೆಗೆ ತೆರೆದಿರುತ್ತದೆ. ತರೀಕೆರೆ TUMCOS ಮೊದಲಿನಿಂದ ಇದ್ದರೂ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಬೀರೂರು MAMCOS ನಲ್ಲಿ ನಾನು ಸದಸ್ಯನಾಗಿರುವುದಿಲ್ಲ. ಚನ್ನಗಿರಿಯ TUMCOS ನಲ್ಲಿ ಇರುವ ನಿಯಮಗಳು ನನಗೆ ತಿಳಿದಿರುತ್ತದೆ. ಚನ್ನಗಿರಿಯ TUMCOS ನಲ್ಲಿ ರೈತರು TUMCOS ಹೊರತುಪಡಿಸಿ ಮತ್ತೆಲೂ ಅಡಿಕೆ ಮಾರಾಟ ಮಾಡಬಾರದೆಂಬ ನಿಯಮ ಇರುತ್ತದೆ ಎಂದರೆ ಸರಿ. ಸದರಿ ನಿಯಮವನ್ನು ಅದರ ಸದಸ್ಯರು ಕಡ್ಡಾಯವಾಗಿ ಪಾಲನೆ ಮಾಡಬೇಕಾಗುತ್ತದೆ ಎಂದರೆ ಸರಿ.

ನಾನು ಆರೋಪಿಗೆ ಯಾವುದೇ ಅಡಿಕೆಯನ್ನು ಸರಬರಾಜು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಅಡಿಕೆ ನೀಡಿದ ಬಗ್ಗೆ ನಮ್ಮ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಬಳಿ ರಶೀದಿ ಇರುತ್ತದೆ ಎಂದು

ನುಡಿಯುತ್ತಾರೆ. ಸದರಿ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಆರೋಪಿಯು ನನಗೆ ದೂರದ ಸಂಬಂಧಿಕರಾಗಿರುತ್ತಾರೆ ಎಂದರೆ ಸರಿ. ನನ್ನ ಮತ್ತು ಆರೋಪಿಯ ನಡುವೆ ಕುಟುಂಬದ ವಿಚಾರದಲ್ಲಿ ಕೆಲವು ವೈಮನಸ್ಸುಗಳು ಇತ್ತು ಎಂದರೆ ಸರಿಯಲ್ಲ. ಆರೋಪಿಯ ಅಕ್ಕನ ಹೆಸರು ಶಿವಲಿಂಗಮ್ಮ ಎಂದರೆ ಸರಿ. ಶಿವಲಿಂಗಮ್ಮ ರವರ ಗಂಡನ ಹೆಸರು ಮೂರ್ತಪ್ಪ ಎಂದರೆ ಸರಿ. ಅವರ ಸಂಸಾರದ ಬಗ್ಗೆ ನನಗೆ ಅಷ್ಟಾಗಿ ಗೊತ್ತಿರುವುದಿಲ್ಲ.

ಅಸಲು ದಾವಾ 247/2019 ಪಿಸಿಜೆ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚನ್ನಗಿರಿಯಲ್ಲಿ ಆರೋಪಿ ನನ್ನ ವಿರುದ್ದ ಒಂದು ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು 4 ನೇ ಪ್ರತಿವಾದಿಯಾಗಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಹಾಜರಾಗಿರುವುದಿಲ್ಲ. ಸಾಕ್ಷಿಯು ಮುಂದುವರೆದು ಅದರ ಅವಶ್ಯಕತೆ ನನಗೆ ಇರಲಿಲ್ಲ. ಸದರಿ ದಾವೆಯಲ್ಲಿ ನಾನು ಹಾಜರಾಗದ ಕಾರಣ ದಾವೆಯಲ್ಲಿ ಏನಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ದಾವೆಯ ಪ್ರತಿವಾದಿಗಳು ಎಲ್ಲರೂ ಆರೋಪಿಯ ವಿರುದ್ದ ಇತರೇ ಪ್ರಕರಣಗಳನ್ನು ಹೂಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಂಜುಂಡಸ್ವಾಮಿ, ಸಂತೋಷ್, ಶಿವಲಿಂಗಪ್ಪ, ಜಿ ಎಸ್ ರವಿ, ಮುತ್ತಪ್ಪ ಮತ್ತು ಶಿವಣ್ಣ ಎನ್ನುವವರು ಪ್ರತಿವಾದಿಗಳು ಆಗಿದ್ದರು ಎಂದರೆ ಸರಿ. ಸದರಿ ವ್ಯಕ್ತಿಗಳು ಎಲ್ಲರೂ ಆರೋಪಿಯ ವಿರುದ್ದ ವಿವಿಧ ಚೆಕ್ ಪ್ರಕರಣವನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ವ್ಯಕ್ತಿಗಳು ನನಗೆ ಸುಮಾರು 10-15 ವರ್ಷಗಳಿಂದ ಪರಿಚಯಸ್ಥ ವ್ಯಕ್ತಿಗಳಾಗಿರುತ್ತಾರೆ. ಆರೋಪಿಯ ಮಗ ಅಂಗವಿಕಲ ಆಗಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಮೇಲೆ

ಹೇಳಿದ ದಾವೆಯ ಪ್ರತಿವಾದಿಗಳು  ಅಷ್ಟು ಜನ ವ್ಯಕ್ತಿಗಳು ಪಾಂಡುಮಟ್ಟಿ ಗ್ರಾಮದಲ್ಲಿ ಆರೋಪಿಯ ಮನೆಗೆ ನುಗ್ಗಿ ಗಲಾಟೆ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ಘಟನೆಗೆ ಸಂಬಂಧಪಟ್ಟಂತೆ  ಆರೋಪಿಯು ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಮೇಲೆ ಹೇಳಿದ ದಾವೆಯ ಪ್ರತಿವಾದಿಗಳ ವಿರುದ್ದ ಒಂದು ದೂರನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯದಲ್ಲಿ ಮೇಲೆ ಹೇಳಿದ ದಾವೆಯ ಪ್ರತಿವಾದಿಗಳು ಆರೋಪಿಯ ಮನೆಯಲ್ಲಿ ಇದ್ದ ಸಹಿ ಮಾಡಿದ ಖಾಲಿ ಚೆಕ್ ಪುಸ್ತಕವನ್ನು ಕಳವು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಚೆಕ್ ಪುಸ್ತಕದಲ್ಲಿ ಮೇಲೆ ಹೇಳಿದ ವ್ಯಕ್ತಿಗಳಿಂದ ಒಂದು ಚೆಕ್ ಅನ್ನು ಪಡೆದು ದುರುಪಯೋಗಪಡಿಸಿ ಈ ಸುಳ್ಳು ಪ್ರಕರಣ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮೇಲೆ ಹೇಳಿದ ದಾವೆ ಹೂಡಿದ ನಂತರದಲ್ಲಿ ಪ್ರತಿವಾದಿಗಳಾದ ನಾವು ಮತ್ತೊಮ್ಮೆ ಆರೋಪಿಗೆ ತೊಂದರೆ ನೀಡುವುದಿಲ್ಲ ಎಂದು ಭರವಸೆ ನೀಡಿ, ಸದರಿ ದಾವೆಯಲ್ಲಿ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಂತೋಷ್, ಶಂಕರಮೂರ್ತಿ, ಮುದ್ದಪ್ಪ, ಎನ್ನುವವರು ಆರೋಪಿಯ ವಿರುದ್ದ ಹಾಕಿದ್ದ ಚೆಕ್ ಪ್ರಕರಣಗಳು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಉಳಿದ ವ್ಯಕ್ತಿಗಳು ಹೂಡಿದ್ದ ಚೆಕ್ ಅಮಾನ್ಯ ಪ್ರಕರಣದಲ್ಲಿ ಆರೋಪಿಗೆ ಶಿಕ್ಷೆಯಾಗಿದ್ದು ಅವರು ಅದನ್ನು ಮಾನ್ಯ ಸತ್ರ ನ್ಯಾಯಾಲಯದಲ್ಲಿ Criminal Appeal 36/2025 ರಿಂದ 39/2025 ರಂತೆ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣಗಳಲ್ಲಿ ಆರೋಪಿಯಿಂದ ಯಾವುದೇ ಮುಂಗಡ ಹಣ ಕಟ್ಟಿಸಿಕೊಳ್ಳದೇ ತಡೆಯಾಜ್ಞೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದ ಪಿರ್ಯಾದಿನಲ್ಲಿ ಬರೆದಿರುವ ವಿಚಾರದ ಬಗ್ಗೆ ನಾನು ವಕೀಲರಿಗೆ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ಚೆಕ್ ನಲ್ಲಿ ಇರುವ ಸಹಿಯ ಶಾಹಿಗೂ ಹಾಗೂ ಇತರೇ ಬರವಣಿಗೆಗಳ ಶಾಹಿಗೂ ವ್ಯತ್ಯಾಸ ಇರುತ್ತದೆ

ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಚೆಕ್ ನಲ್ಲಿ ಇರುವ ಬರವಣಿಗೆಗಳನ್ನು ಆರೋಪಿಯ ಸ್ನೇಹಿತ ಸದಣ್ಣ ಎನ್ನುವವರ ಬರೆದಿದ್ದು ಸಹಿ ಮಾತ್ರ ಆರೋಪಿಯು ನನ್ನ ಸಮಕ್ಷಮ ಹಾಕಿರುತ್ತಾನೆ. ಆ ರೀತಿ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚೆಕ್ ನಲ್ಲಿ ಇರುವ ಹಣವನ್ನು ಸುಳ್ಳಾಗಿ ನನ್ನ ಅನುಕೂಲಕ್ಕೆತಕ್ಕಂತೆ ಬರೆದಿರುತ್ತೇನೆ ಎಂದರೆ ಸರಿಯಲ್ಲ. ದಿಃ 27.12.2019 ರಂದು ನಾನು ಕೊಡಿಸಿರುವ ನೋಟೀಸ್ ಸುಳ್ಳು ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ನೋಟೀಸ್ ಅನ್ನು ತಯಾರು ಮಾಡಲು ನಾನು ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ಚೆಕ್ ನಲ್ಲಿ ಇರುವ ಸಹಿ ಮಾತ್ರ ಆರೋಪಿಯದ್ದಾಗಿದ್ದು, ಉಳಿದ ಅಂಶಗಳನ್ನು ದುರುದ್ದೇಶದಿಂದ ನಾನು ಬರೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಕಳುಹಿಸಿರುವ ನೋಟೀಸ್ ಗೆ ಆರೋಪಿಯು ಯಾವುದೇ ಪ್ರತ್ಯುತ್ತರ ನೀಡಿರುವುದಿಲ್ಲ, ಆದರೆ ಮೌಖಿಕವಾಗಿ ಹಣವನ್ನು ನೀಡುವುದಾಗಿ ತಿಳಿಸಿರುತ್ತಾರೆ. ಸದರಿ ವಿಚಾರವನ್ನು ನನಗೆ ಆರೋಪಿಯು 2019 ರಲ್ಲೇ ಹೇಳಿರುತ್ತಾರೆ. ಆರೋಪಿಗೆ ನಾನು ಯಾವುದೇ ಚೆಕ್ ಅಮಾನ್ಯ ಪ್ರಕರಣ ಹೂಡುವುದಿಲ್ಲ ಎಂದು ಭರವಸೆ ನೀಡಿದ್ದ ಕಾರಣ ಅವರು ಮರು ಉತ್ತರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರವನ್ನು ತಯಾರಿಸಲು ನಾನು ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಈ ಸುಳ್ಳು ಪ್ರಕರಣವನ್ನು ಹೂಡಿದ ಕಾರಣ ಆರೋಪಿಗೆ ಮಾನಸಿಕವಾಗಿ ನೋವುಂಟಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಪ್ರಕರಣ ಹೂಡಿದ ಕಾರಣ ಆರೋಪಿಗೆ ಹೃದಯ ಸಂಬಂಧಿ ತೊಂದರೆ ಆಗಿರುತ್ತದೆ ಎಂದರೆ ಸರಿಯಲ್ಲ.

P.C.J & JMFC, Tarikere
(Itinerate at Ajjampura).

CC No. 212/2020
PW-1

ಮೇಲೆ ಹೇಳಿದ ಅಸಲು ದಾವೆಯ ಪ್ರತಿವಾದಿಗೆ ನಾನೇ ಮುಖಂಡನಾಗಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಜೊತೆ ನಾನು ಯಾವುದೇ ಹಣಕಾಸಿನ ವ್ಯವಹಾರ ಮಾಡದಿದ್ದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನೋಟೀಸ್ ನಲ್ಲಿ, ಮುಖ್ಯ ವಿಚಾರಣೆ ಹಾಗೂ ಪಿರ್ಯಾದಿಯಲ್ಲಿ ಇರುವ ವಿಚಾರಗಳನ್ನು ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಕಿರುವ ಪಹಣಿಗಳಲ್ಲಿ ಕೆಲವು ಪಹಣಿಗಳು ನನ್ನದಾಗದಿದ್ದರೂ ದುರುದ್ದೇಶದಿಂದ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ವಿರುದ್ದ ಹೂಡಿರುವ ಮೇಲೆ ಹೇಳಿದ ದಾವೆಗೆ ಸಂಬಂಧಪಟ್ಟಂತೆ ದ್ವೇಷದಿಂದ ಈ ಸುಳ್ಳು ಪ್ರಕರಣ ಹೂಡಿರುತ್ತೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ. ತರೀಕೆರೆ
(ಸಂಚಾರಿ ನ್ಯಾಯಾಲಯ ಅಜ್ಜಂಪುರ)

ಸಾಕ್ಷಿಯ ಸಹಿ: